ಓಎಸ್. ನಂ.171/2023

ಡಿ.ಡಬ್ಲ್ಯೂ: 4

**ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಎಂ.ಪಿ ವಕೀಲರಿಂದಃ**

1 ನೇ ಪ್ರತಿವಾದಿ ದೂರದಿಂದ ಅಕ್ಕ-ತಂಗಿ ಆಗಬೇಕು. 7 ನೇ ಪ್ರತಿವಾದಿ ಸಹ ದೂರದಿಂದ ಅಕ್ಕ-ತಂಗಿ ಆಗಬೇಕು. ಬಂದಗಿಸಾಬ ಈತನು 1 ನೇ ಪ್ರತಿವಾದಿಗೆ ದೊಡ್ಡಪ್ಪನ ಮಗ ಆಗಬೇಕು. ಹಿಬಾದ ಸಾಕ್ಷಿದಾರನಾದ ಬಾವಾಸಾಬ ತಂದೆ ಬಂದಿಗಿಸಾಬ ಸಿಪಾಯಿ ಈತನು ಪಾರ್ಶವಾಯು ಇದ್ದು ಬನ್ನೆಟಿಯಲ್ಲಿ ಇರುತ್ತಾನೆ, ಸಾಕ್ಷಿಮುಂದುವರೆದು ಆತನು ಮಾತನಾಡುತ್ತಾನೆ ಎಂದು ನುಡಿಯುತ್ತಾರೆ. ಬಾವಾಸಾಬ ಮೊದಲು ನೀಲರಗಿಯಲ್ಲಿ ಇರುತ್ತಿದ್ದನು. ಸದರಿಯವರನು ನೀರಲಗಿಯಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಇರುತ್ತಿದ್ದನು ಎಂದು ನನಗೆ ಗೂತ್ತಿರುವುದಿಲ್ಲ. ನೀರಿಲಗಿಯರಲ್ಲಿರುವ ಬಾವಾಸಾಬನಿಗೆ ಎಷ್ಟು ವಯಸ್ಸು ನಡೆಯುತ್ತಿದ್ದವು ನನಗೆ ಗೊತ್ತಿರುವುದಿಲ್ಲ. ನೀರಿಲಗಿಯರಲ್ಲಿರುವ ಬಾವಾಸಾಬನಿಗೆ ಮಕ್ಕಳು ಹುಟ್ಟಿದ್ದವೋ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದೊಡ್ಡಮಗನಾದ ನಬೀಸಾಬ ಎಷ್ಟು ವರ್ಷದವನು ಇದ್ದಾಗ ನೀರಲಗಿ ಬಿಟ್ಟು ಬನ್ನೆಟ್ಟಿಗೆ ಬಂದಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಬಾವಸಾಬನಿಗೆ ತೀರಿಕೊಳ್ಳುವ ಸಮಯದಲ್ಲಿ ಎಷ್ಟು ವಯಸ್ಸು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಬೀಸಾಬನ ಮದುವೆ ಎಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

**02.** ಬಾವಾಸಾಬ ಈತನು ತನ್ನ ಮಗನಾದ ನಬೀಸಾಬನಿಗೆ ಜಮೀನನ್ನು ಬಿಟ್ಟುಕೊಡುವಾಗ ನಾನು ಇರಲಿಲ್ಲ. ಆ ಸಮಯದಲ್ಲಿ ಯಾರು ಯಾರು ಇದ್ದರು ಮತ್ತು ನಬೀಸಾಬನಿಗೆ ಎಷ್ಟು ವಯಸ್ಸು ನಡೆಯುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಯಾವ ವರ್ಷದಲ್ಲಿ ಬಿಟ್ಟು ಕೊಟ್ಟಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಬಾವಾಸಾಬ ಇದ್ದಾಗ ಆತನ

ಎಲ್ಲರೂ ಮಕ್ಕಳು ಕೂಡಿಯೇ ಉಣ್ಣುತ್ತಿದ್ದರೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಬಾವಾಸಾಬನು ನಬೀಸಾಬನಿಗೆ ದಾವಾ ಆಸ್ತಿಯನ್ನು ಬಿಟ್ಟು ಕೊಟ್ಟ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಬಾವಸಾಬನ ತೀರಿಕೊಂಡ ನಂತರ ನಬೀಸಾಬ ದೊಡ್ಡ ಮಗ ಇರುವುದರಿಂದ ಆತನ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಹೊಲ ಬಿಟ್ಟುಕೊಟ್ಟಿರುತ್ತಾನೆ ಎಂದು ನಾನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಬೀಸಾಬನು ಎಲ್ಲರಿಗೂ ಆಸ್ತಿ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ 1 ರಿಂದ 3 ನೇ ಪ್ರತಿವಾದಿಯರ ಮಾತು ಕೇಳಿ ಬಾವಾಸಾಬನು ನಬೀಸಾಬನಿಗೆ ಹಿಬಾ ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತ 3 ನೇ ಪ್ರತಿವಾದಿಯರು ನನಗೆ ತಂಗಿಯ ಮಕ್ಕಳು ಆಗಿರುವುದರಿಂದ ಅವರಿಗೆ ಅನುಕೂವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಮಾತು ಕೇಳಿ ವಾದಿಯರಿಗೆ ಆಸ್ತಿ ಕೊಡಬಾರದು ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾವಾಸಾಬ ತೀರಿಕೊಂಡ ನಂತರ ಆತನ ಎಲ್ಲ ಮಕ್ಕಳು ಇಲ್ಲಿಯವರೆಗೂ ಕೂಡಿಯೇ ಉಣ್ಣುತ್ತಿದ್ದಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: 25 ನೇ ಪ್ರತಿವಾದಿ ಪರ ಶ್ರೀ ವಾಯ್ ಹೆಚ್ ವಕೀಲರಿಂದಃ</u>**

ನೀರಲಗಿ ಮತ್ತು ಬನ್ನೆಟ್ಟಿ ಗ್ರಾಮ 5 ರಿಂದ 6 ಕಿ.ಮಿ ಅಂತರ ಇರುತ್ತವೆ.

**ಮರು ವಿಚಾರಣೆ: ಇಲ್ಲಾ.**

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)</u>

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,

ಶೋರಾಪುರ.